# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 21.06.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ದಿನಾಂಕ: 09.06.2011 ರಂದು ಬೆಳಿಗ್ಗೆ ವಾರ್ಡ್ ನಂ.95, ಸುಭಾಷ್‌ನಗರ ವ್ಯಾಪ್ತಿಯಲ್ಲಿನ ಸಂಪಿಗೆ ರಸ್ತೆ, ಮಂತ್ರಿ ಮಾಲ್, ಸೌತ್ ಎಂಡ್ ಲಿಂಕ್ ರಸ್ತೆ, ಎಂ.ಡಿ. ಬ್ಲಾಕ್ 4ನೇ ಮುಖ್ಯರಸ್ತೆಯನ್ನು ತಪಾಸಣೆ ಮಾಡುವ ಸಂದರ್ಭದಲ್ಲಿ ಎಂ.ಡಿ. ಬ್ಲಾಕ್ 4ನೇ ಮುಖ್ಯರಸ್ತೆಯಲ್ಲಿದ್ದ ಮಣ್ಣು, ಕಲ್ಲು ಮತ್ತು ಪಾದಚಾರಿ ಮಾರ್ಗದಲ್ಲಿದ್ದ ಅನುಪಯುಕ್ತ ವಸ್ತುಗಳನ್ನು ತಕ್ಷಣ ತೆರವುಗೊಳಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿರುತ್ತಾರೆ.

ಪಾಲಿಕೆಯ ಆಯುಕ್ತರ ಸೂಚನೆಯಂತೆ ತಕ್ಷಣವೇ ಕ್ರಮ ಕೈಗೊಂಡು ಎಂ.ಡಿ. ಬ್ಲಾಕ್ 4ನೇ ಮುಖ್ಯರಸ್ತೆಯಲ್ಲಿದ್ದ ಮಣ್ಣು, ಕಲ್ಲು ಮತ್ತು ಪಾದಚಾರಿ ಮಾರ್ಗದಲ್ಲಿದ್ದ ಅನುಪಯುಕ್ತ ವಸ್ತುಗಳನ್ನು ತಕ್ಷಣ ತೆರವುಗೊಳಿಸಲಾಯಿತು. ಎಂ.ಡಿ. ಬ್ಲಾಕ್ 4ನೇ ಮುಖ್ಯರಸ್ತೆಯಲ್ಲಿ ನೂತನವಾಗಿ ನಿರ್ಮಿಸುತ್ತಿದ್ದ ಕಟ್ಟಡದ ಮಾಲೀಕರು ಪಾದಚಾರಿ ಮಾರ್ಗದಲ್ಲಿ ಸಾಮಗ್ರಿಗಳನ್ನು ಶೇಖರಿಸಿದ್ದು ಹಾಗೂ ಮಣ್ಣನ್ನು ಹಾಕಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುವುದನ್ನು ಪಾಲಿಕೆಯ ಆಯುಕ್ತರು ಗಮನಿಸಿ, ಸದರಿ ಕಟ್ಟಡದ ಮಾಲೀಕರಿಗೆ ರೂ.50,000/- ರೂ.ಗಳನ್ನು ದಂಡ ವಿಧಿಸುವಂತೆ ಸೂಚಿಸಿದ್ದ ಮೇರೆಗೆ ಕಟ್ಟಡದ ಮಾಲೀಕರಿಂದ ರೂ.50,000/- ರೂ.ಗಳನ್ನು ದಿನಾಂಕ: 17.06.2011 ರಂದು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿರುತ್ತದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗಾಂಧಿನಗರ) ಉಪ ವಿಭಾಗ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**